ಸಿ.ಸಿ. **4/2022**
ಡಿ. ಡಬ್ಲ್ಯೂ ಃ **01**

**ಸಾಕ್ಷಿಗೆ ದಿನಾಂಕ 23.07.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು:ಪಿರ್ಯಾದುದಾರರ ಪರ ವಕೀಲರಿಂದ**

ನಾನು ಪಿಯುಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ಖಾಲಿ ಪತ್ರ, ಪ್ರನೋಟ್ ಹಾಗೂ ಚೆಕ್ಕಗೆ ಸಹಿ ಮಾಡುವುದಿಲ್ಲ. ಪಿರ್ಯಾದುದಾರರು ನನಗೆ 2015 ರಿಂದ ಪರಿಚಯಸ್ಥರು. ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯಕ್ಕಾಗಿ ಬ್ಯಾಂಕ್ ನಿಂದ ಹಾಗೂ ಸಾರ್ವಜನಿಕರಿಂದ ಸಾಲ ಪಡೆಯುತ್ತೇನೆ ಎಂದರೆ ಸರಿ. ನಾನು

ಸಾರ್ವಜನಿಕರಿಂದ ಸಾಲ ಪಡೆಯುವಾಗ ಭದ್ರತೆಗಾಗಿ ಚೆಕ್ಕು ಹಾಗೂ ಇತರೆ ದಾಖಲೆಗಳನ್ನ ಬರೆದುಕೊಡುತ್ತೇನೆ ಎಂದರೆ ಸರಿ. ನಾನು ಹಾಜರು ಪಡಿಸಿದ ದಾಖಲೆಗಳು 2019-20, 2020-21 ರ ಸಾಲಿನ ದಾಖಲೆಗಳು. ನನಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇರುವುದಿಲ್ಲ.

ನಾನು ಕೊವಿಡ್ ಸಂದರ್ಬದಲ್ಲಿ 09.03.2020 ರಲ್ಲಿ ಪಿರ್ಯಾದುದಾರರಿಂದ ವ್ಯವಸಾಯಕ್ಕೆ ಹಣದ ಅವಶ್ಯಕತೆಯಿದೆ ಎಂದು 2 ಲಕ್ಷ ಕೈ ಸಾಲ ಪಡೆದುಕೊಂಡಿರುತ್ತೇನೆ ಎಂದರೆ  ಸರಿಯಲ್ಲ. 2 ಲಕ್ಷ ಹಣಕ್ಕೆ ಶೇಕಡಾ 2 ರಂತೆ ಬಡ್ಡಿ ಕೊಡುವುದಾಗಿ ಸಾಲ ಪಡೆದುಕೊಂಡಿರುತ್ತೇನೆ  ಎಂದರೆ  ಸರಿಯಲ್ಲ. ಸಾಕ್ಷಿ ಪಿರ್ಯಾದುದಾರರ ಗಂಡನಿಂದ 50 ಸಾವಿರ ಸಾಲ ಪಡೆದುಕೋಂಡಿರುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಂದ 2 ಲಕ್ಷ ಸಾಲ ಪಡೆದು ನಿಪಿ-2 ರಂತೆ ಚೆಕ್ಕು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ 50 ಸಾವಿರ ಹಣಕ್ಕೆ ನಿಪಿ-1 ರಂತೆ ಖಾಲಿ ಚೆಕ್ಕಗೆ ಸಹಿ ಮಾಡಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದುದಾರರಿಗೆ ಚೆಕ್ಕು ನೀಡಿ ಚೆಕ್ಕನ ಮೂಲಕ 12 ಲಕ್ಷ ಹಣ ಪಡೆದುಕೊಳ್ಳಿ ಎಂದು ಚೆಕ್ಕು ಕೊಟ್ಟಿರುತ್ತೇನೆ  ಎಂದರೆ  ಸರಿಯಲ್ಲ. ಸದರಿ ಚೆಕ್ಕು ಮಾನ್ಯ ಗೊಳ್ಳುವುದಾಗಿ ಬರವಸೆ ನೀಡಿ ಅಮಾನ್ಯ ಗೊಳ್ಳು ವಂತೆ ಮಾಡಿರುತ್ತೇನೆ ಎಂದರೆ  ಸರಿಯಲ್ಲ. ನಾನು ನೀಡಿದ ಚೆಕ್ಕು ಪಿರ್ಯಾದುದಾರರು ಬ್ಯಾಂಕ್ ಗೆ ಸಲ್ಲಿಸಿದಾಗ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯ ಗೊಂಡಿರುತ್ತದೆ  ಎಂದರೆ ಸರಿಯಲ್ಲ.

ಚೆಕ್ಕು ಅಮಾನ್ಯಗೊಂಡ ನಂತರ ದಿನಾಂಕ 08.10.2021 ರಂದು ಪಿರ್ಯಾದುದಾರರು ನನಗೆ ವಕೀಲರ ಮಾಲಕ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ನಾನು ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ನೋಟಿಸು ಪಡೆದ ನಂತರ ಪಿರ್ಯಾದುದಾರರು ಸುಳ್ಳು ನೋಟಿಸು ಕೊಟ್ಟಿರುತ್ತಾರೆ ಎಂದು ಎಲ್ಲಿಯೂ ಸಹ ದೂರು ದಾಖಲು ಮಾಡಿಲ್ಲ. ನ್ಯಾಯಾಲಯಕ್ಕೆ ಹಾಜರಾದ ನಂತರ ನಾನು ಪೋಲಿಸರಿಗೆ ದೂರು

ಕೊಟ್ಟಿಲ್ಲ. ಪಿರ್ಯಾದುದಾರರು ನೀಡಿದ ನೋಟಿಸಿನಲ್ಲಿ ಇರುವ ವಿಚಾರಗಳನ್ನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪಿರ್ಯಾದುದಾರರ ಗಂಡನಿಂದ 50 ಸಾವಿರ ಹಣ ಪಡೆದು ವಾಪಸ್ಸು ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಪಿರ್ಯಾದುದಾರರಿಂದ ಹಣ ಪಡೆದು ವಾಪಸ್ಸು ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಹಾಜರು ಪಡಿಸಿದ ದಾಖಲೆಗಳು 2020 ರ ಮುಚಿಂತವಾದ ದಾಖಲೆಗಳು ಎಂದರೆ ಸರಿ. ನಾನು ಹಾಜರು ಪಡಿಸಿದ ದಾಖಲೆಗಳಿಗೂ ಪ್ರಸ್ತುತ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನುಸಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ನಾನು ಭರ್ತಿ ಮಾಡಿ ಪಿರ್ಯಾದುದರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಖಾಲಿ ಚೆಕ್ಕು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಚಂದ್ರೆಗೌಡ ಬಿನ್ ಅನ್ನೆಗೌಡ ಎಂದರೆ ನಾನು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಕಲ್ಲೆಗೌಡ. ನನ್ನ ತಂದೆಯ ಹೆಸರು ಅನ್ನೆಗೌಡ ಆದರೂ ಸಹ ನನಾನು ಕಲ್ಲೆ ಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದರರಿಗೆ ಮೋಸ ಮಾಡವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು**
**ಜೆಎಂಎಫ್.ಸಿ, ಹುಣಸೂರು.**